KACM010009052015

Presented on : 21-08-2015
Registered on : 21-08-2015
Decided on : --
Duration :

**IN THE COURT OF**
**ADDL DISTRICT AND SESSIONS JUDGE CHIKMAGALUR**
**AT Chikmagalur,CHIKMAGALUR**
**(Presided Over by B PUSHPANJALI)**

**SPL.C/39/2015**

**Exhibit No.**

Complainant(PROSECUTION):
State by Gonibeedu Police

**VERSUS**

Accused:
J.C. Thammannagowda @ Janige Thammanna Gowda So Channappagowda, aged 46 years JanigeHarmakki village, Gonibeedu hobli, Mudigere Taluk

2: H.S.Ganapathigowda So Sannegowda aged 55 years JanigeHarmakki village Gonibeedu hobli Mudigere Taluk

3: H.M.Amith So Manjunathagowda aged 30 years JanigeHarmakki village Gonibeedu hobli Mudigere Taluk

4: H.M.Ajith So Manjunathagowda aged 28 years JanigeHarmakki village Gonibeedu hobli Mudigere Taluk

5:H.A.Chirag So Ashokgowda aged 20 years
All are Ro Janige Harmakki village Gonibeedu hobli Mudigere Taluk

---

PP for State Complainant}: Public Prosecutor,
Advocate for H.M. SUDHAKAR appearing for J.C. Thammannagowda @ Janige Thammanna Gowda So Channappagowda, aged 46 years Advocate ,

---

**Offence punishable under : p/u/s.504,506,324,323,r/w.149ofIPCandSec.3(1)(10)ofSC/ST(PA)Act of -,**

**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಚಿಕ್ಕಮಗಳೂರು**

**ಸ್ಪೆಷಲ್ ಮೊಕದ್ದಮೆ ಸಂಖ್ಯೆಃ 39/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಪ್ರಕಾಶ | ಪಿ.ಡಬ್ಲ್ಯೂ. | 2 |
| ತಂದೆಯ ಹೆಸರು | ಃ ಸಣ್ಣಯ್ಯ | ಸಿ.ಡಬ್ಲ್ಯೂ. | 2 |
| ವಯಸ್ಸು | ಃ 27 ವರ್ಷ | | |
| ಉದ್ಯೋಗ | ಃ ಕೂಲಿ ಕೆಲಸ | | |
| ವಾಸಸ್ಥಳ | ಃ ಹಾರ್ಮಕ್ಕಿ , ಮೂಡಿಗೆರೆ ತಾಃ | | |

ದಿಃ 03-01-2022 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

1. ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ಇದೆ. ನನಗೆ ಚಾಸಾ.1 ರವರು ಗೊತ್ತು. ಆಕೆ ನನ್ನ ಚಿಕ್ಕಮ್ಮ. ಚಾಸಾ.3 ನನ್ನ ದೊಡ್ಡಪ್ಪನ ಮಗ.

2. ಈಗ ನೋಡುತ್ತಿರುವ ನೋಟೀಸ್ ಮತ್ತು ನಿಪಿ.2 ರಲ್ಲಿ ನನ್ನ ಸಹಿ ಇರುತ್ತದೆ. ಸದರಿ ನೋಟೀಸ್‌ನ್ನು ನಿಶಾನೆ ಪಿ.6 ಎಂದು ಗುರುತಿಸಲಾಯಿತು. ಅವುಗಳಲ್ಲಿ ಸಾಕ್ಷಿ ಗುರುತು ಹಿಡಿದ ತಮ್ಮ ಸಹಿಯನ್ನು ನಿಶಾನೆ ಪಿ.2(ಬಿ) ಮತ್ತು ಪಿ.6(ಎ) ಎಂದು ಗುರುತಿಸಲಾಯಿತು. ದಿಃ 14-12-2014 ರಂದು ಹಾರ್ಮಕ್ಕಿ ಗ್ರಾಮದ ನಮ್ಮ ಕಾಲೋನಿಯ ನೀರಿನ ಟ್ಯಾಂಕ್ ಹತ್ತಿರ ರುಜು ಮಾಡಿರುತ್ತೇನೆ. ನಿಪಿ.2 ಕ್ಕೆ ನನ್ನ ಜೊತೆ ಚಾಸಾ.1 ಮತ್ತು 3 ರವರು ಸಹಿ ಮಾಡಿರುತ್ತಾರೆ. ಗಲಾಟೆಯ ಸ್ಥಳವನ್ನು ಚಾಸಾ.1 ರವರು ತೋರಿಸಿರುತ್ತಾರೆ. ಈಗ ನೋಡುತ್ತಿರುವ ನಿಶಾನೆ ಪಿ.3 ಮತ್ತು ಪಿ.4 ಫೋಟೋಗಳಲ್ಲಿ ನನ್ನ, ಚಾಸಾ.1

ಮತ್ತು *3* ರವರ ಇರುವಿಕೆ ಕಂಡು ಬರುತ್ತದೆ. ಮಹಜರ ಕಾಲದಲ್ಲಿ ಪೊಲೀಸರು ಕಲ್ಲು, ದೊಣ್ಣೆ, ಅಡಿಕೆ ದಬ್ಬೆ, ಚೂಡಿದಾರ ಟಾಪ್, ರಕ್ತದ ಕಲೆ ಇರುವ ಸ್ವೆಟರ್ ನ್ನು ಅಮಾನತು ಪಡಿಸಿಕೊಂಡರು. ಸದರಿ ವಸ್ತುಗಳು ಈಗ ನ್ಯಾಯಾಲಯದ ಮುಂದೆ ಇರುವ ಮು.ಮಾ.*1* ರಿಂದ *5* ಇರುತ್ತವೆ. ನಿಪಿ.*2* ನ್ನು ಸಂಜೆ *4.30* ರಿಂದ *5.30* ರವರೆಗೆ ಬರೆದರು.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಹೆಚ್.ಎಂ.ಎಸ್. ವಕೀಲರಿಂದಃ</u>

(ಈ ಸಮಯದಲ್ಲಿ ಶ್ರೀ ಹೆಚ್.ಎಂ.ಎಸ್. ವಕೀಲರು ಸಮಯವಕಾಶವನ್ನು ಕೋರಿದ್ದು, ನೀಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

ಸಹಿ/-

(ಬಿ.ಪುಷ್ಪಾಂಜಲಿ)

*1* ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ರೂ.

ದಿಃ *22-02-2023* ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಹೆಚ್.ಎಂ.ಎಸ್. ವಕೀಲರಿಂದಃ</u>

*3.* ನಾನು ಜನ್ನಾಪುರದಿಂದ ಬಂದಾಗ ನೀರಿನ ಟ್ಯಾಂಕಿನ ಹತ್ತಿರ ಕಿರುಚಾಡುತ್ತಿದ್ದರು. ಗಲಾಟೆಯಾದ ಮೇಲೆ ಆಸ್ಪತ್ರೆಗೆ ಹೋಗಿ ನಂತರ ಪೊಲೀಸ್ ಠಾಣೆಗೆ ನಾನು ಮತ್ತು ಚಾಸಾ.*3* ರವರು ಹೋಗಿರುತ್ತೇವೆ.

ಪೊಲೀಸ್ ಠಾಣೆಯಲ್ಲಿ ಪೊಲೀಸರು ನನ್ನ *3* ರುಜುಗಳನ್ನು ಮತ್ತು ಚಾಸಾ.*3* ರವರ *2* ರುಜುಗಳನ್ನು ಪಡೆದುಕೊಂಡಿರುತ್ತಾರೆ. ಪೊಲೀಸರು ಪಡೆದುಕೊಂಡ *3* ರುಜುಗಳ ದಾಖಲೆಗಳಲ್ಲಿ ಬರೆದ ಮಾಹಿತಿ ಗೊತ್ತಾ ಎಂದರೆ ಗೊತ್ತಿಲ್ಲ ಎಂದು ಹೇಳುತ್ತೇನೆ. ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುವುದನ್ನು ಬಿಟ್ಟು ಸ್ಥಳದಲ್ಲಿ ಒಂದು ಸಹಿ ಮಾಡಿರುತ್ತೇನೆ. ಸ್ಥಳದಲ್ಲಿ ಬರೆದ ದಾಖಲೆಗಳಲ್ಲಿ ದೊಣ್ಣೆ, ಬಟ್ಟೆ, ಕಲ್ಲು ಅಮಾನತು ಪಡಿಸಿಕೊಂಡ ಬಗ್ಗೆ ಬರೆದಿರುತ್ತಾರೆ. ಬರವಣಿಗೆ ಮಾಡಿಕೊಳ್ಳುವ ಕಾಲಕ್ಕೆ ಮಂಜುನಾಥರವರು ಇದ್ದರು.

*4.* ಪೊಲೀಸರು ಸ್ಥಳಕ್ಕೆ ಬಂದಾಗ ಸುಮಾರು *7* ಜನರಿದ್ದರು. *7* ಜನರಲ್ಲಿ ಪೊಲೀಸರು ಎಲ್ಲರ ರುಜು ಪಡೆದುಕೊಂಡರಾ ಎಂದರೆ ಇಲ್ಲ ಎಂದು ಹೇಳುತ್ತೇನೆ. ನಾನು ಹಾರ್ಮಕ್ಕಿ ಗ್ರಾಮದ ಪಂಚಾಯ್ತಿ ಸದಸ್ಯನಾಗಿರಲಿಲ್ಲ. ನಾನು ಪೊಲೀಸ್ ಠಾಣೆಗೆ ಬೆಳಗ್ಗೆ *10.30* ಗಂಟೆಗೆ ಹೋಗಿದ್ದೆ. ಅಲ್ಲಿ ಸುಮಾರು ಅರ್ಧ - ಮುಕ್ಕಾಲು ಗಂಟೆ ಇದ್ದೆ. ಪೊಲೀಸರು ಸಹಿ ಪಡೆದುಕೊಂಡಾಗ ಮಧ್ಯಾಹ್ನ *3.30* ರಿಂದ *4* ಗಂಟೆಯಾಗಿತ್ತು.

*5.* ಆ ದಿನ ಪೊಲೀಸರು ಮಹಜರ ಮಾಡಲು ಬಂದಿದ್ದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಅದೇ ರೀತಿ ಮಹಜರ ಕಾಲದಲ್ಲಿ ಪೊಲೀಸರು ಕಲ್ಲು, ದೊಣ್ಣೆ, ಅಡಿಕೆ ದಬ್ಬೆ, ಚೂಡಿದಾರ ಟಾಪ್, ರಕ್ತದ ಕಲೆ ಇರುವ ಸ್ವೆಟರ್ ನ್ನು ಅಮಾನತು ಪಡಿಸಿಕೊಂಡರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಮಹಜರಿಗೆ ಬರುವಂತೆ ಪೊಲೀಸರು ನನಗೆ ನೋಟೀಸ್ ಕೊಟ್ಟಿಲ್ಲ. ಎಸ್.ಪಿ. ರವರು ಸ್ಥಳಕ್ಕೆ ಬಂದ ಮೇಲೆ ನನಗೆ ಫೋನ್ ಮಾಡಿ ಕರೆಸಿಕೊಂಡರು.

*6.* ನಿಪಿ.*2* ಮಹಜರಿಗೆ ನಾನು ಪೊಲೀಸ್ ಠಾಣೆಯಲ್ಲಿ ರುಜು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು, ಚಾಸಾ.*1* ಹಾಗೂ *3* ರವರು ಸಂಬಂಧಿಕರು ಎಂದರೆ ಸರಿ. ಆ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

ಸಹಿ/-

(ಬಿ.ಪುಷ್ಪಾಂಜಲಿ)

*1* ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

Visit **ecourts.gov.in** for updates or download mobile app "**eCourts Services**" from Android or iOS